ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಆಕೆಯ ರೂಪ ಕಂಡು ಮೋಹಿತನಾಗಿ ಮದುವೆಯಾದೆ. ಈಗ ಬಲೂನಿನಂತೆ ಆಗಿರುವಳಲ್ಲಾ...?*



ನಿಮ್ಮದೇ ತಪ್ಪು; ಆಕೆಯ ರೂಪವನ್ನು ಹೊಗಳೀ, ಹೊಗಳೀ ಉಬ್ಬಿಸಿದ್ದೀರಿ!

ರಾಜೇಂದ್ರ ಇಂಗಳಗಿ, ರಾಮದುರ್ಗ

*ಗ್ರಂಥಾಲಯಗಳಲ್ಲಿ ಮೊಬೈಲ್‌ನಲ್ಲಿ ಹರಟೆ ಹೊಡೆದು ವಿಶ್ವದಾಖಲೆ ಮಾಡಿದವರಿಗೆ ಯಾವ ಪ್ರಶಸ್ತಿ ನೀಡಬೇಕು?*

ಆಲ್ ಇಂಡಿಯಾ ಅಬ್ಸಲ್ಯೂಟ್ಲೀ ಸ್ಟುಪಿಡ್ ಫೆಲೋ ಪ್ರಶಸ್ತಿ!

ಮಹಾಂತಯ್ಯ ಕೆ. ಮಠ, ಹೂವಿನಹಳ್ಳಿ

*ಕನ್ನಡ ಉಸಿರಾಗಲಿ, ಇಂಗ್ಲಿಷ್ ಹಸಿರಾಗಲಿ ಎನ್ನುತ್ತಾರೆ. ಹಿಂದಿಗೆ ಏನೆನ್ನುತ್ತಾರೆ?*

ಮೆಲುಕು ಹಾಕುವಂತೆಯೇ ಇರಲಿ ಎನ್ನುವರಂತೆ ಮಧುರಗೀತಪ್ರಿಯರು.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ

*ಹಣ ಕೊಟ್ಟರೂ ಅನುಭವ ಸಿಗುವುದಿಲ್ಲ. ಏಕೆ?*

ಸಾಲ ಕೊಡಿ; ಸಿಕ್ಕಾಪಟ್ಟೆ ಅನುಭವ ಸಿಗುತ್ತದೆ!

ಅಮರಯ್ಯಾ ಪತ್ರಿಮಠ, ಸುರಪೂರ

*ನಿದ್ರೆ ಆರೋಗ್ಯಕ್ಕೆ ಒಳ್ಳೆಯದಂತೆ?*



ಸದನದಲ್ಲಿ ನಿದ್ರೆ ಮಾಡಿ, ಮಾಡಿ, ಆರೋಗ್ಯವಾಗಿರುವ ದೊಡ್ಡಗೌಡರೇ ಇದಕ್ಕೆ ಸಾಕ್ಷಿ!

ಎಂ.ಬಿ. ರಂಗಪ್ಪಶೆಟ್ಟಿ, ಮೋಕ

*ಎಲ್ಲಿ ಹೆಂಗಸರಿಗೆ ಮಾನ್ಯತೆ ಇದೆಯೋ ಅಲ್ಲಿ ದೇವತೆಗಳು ಸಂತೋಷ ಪಡುತ್ತಾರಂತೆ. ಗಂಡಸರಿಗೆ ಮಾನ್ಯತೆ ಇರುವ ಕಡೆ?*

ದೇವಿಯರು 'ಪುರುಷಪ್ರಧಾನ ಸಮಾಜಕ್ಕೆ ಧಿಕ್ಕಾರಾ' ಎನ್ನುತ್ತಾ ಸ್ವೀಕರಿಸುವರಂತೆ!

ಎಸ್.ಜಿ. ಕರನಂದಿ, ಹುನಗುಂದ

*ಬಾಳದಾರಿಯಲ್ಲಿ ಮಾರ್ಗದರ್ಶಕರು ಪದೇ ಪದೇ ಎಚ್ಚರಿಸುತ್ತಿದ್ದರೂ ಎಡವುವುದೇಕೆ?*

ಏಕೆಂದರೆ ಕಿವಿಯ ತಮಟೆಗೆ ಅಹಂಕಾರದ ಪರದೆ ಇದ್ದಾಗ ಬ್ರಹ್ಮಕಿವುಡು!

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಜಾತ್ಯತೀತ ದೇಶವೆಂದು ಬೀಗುವ ನಾವು ಪ್ರತಿಯೊಂದರಲ್ಲೂ ಜಾತಿ ಆಧಾರಿತ ನೀತಿಯನ್ನೇ ತೋರಿಸುತ್ತಿದ್ದೇವಲ್ಲಾ...?*

ತಪ್ಪಿಲ್ಲ; ಜಾತಿ+ಅತ+ಈತ = ಜಾತ್ಯಾತೀತ; ಅತ, ಈತ ಇಬ್ಬರೂ ನಮ್ಮ ಜಾತಿಯವರೇ ಆಗಿರಬೇಕೆಂಬುದೇ ಜಾತ್ಯಾತೀತದ ನೀತಿ!

ಕೆ. ಶ್ರೀನಿವಾಸರಾವ್, ಹರಪನಹಳ್ಳಿ

*ತುತ್ತು, ಮುತ್ತುಗಳ ತಾಕಲಾಟದಲ್ಲಿ ನನ್ನ ಅಸ್ತಿತ್ವವೇ ಕುಂದಾಗುವಂತಿದೆ...?*

ದಡ್ಡ; ಬಹಿರಂಗದಲ್ಲಿ ತುತ್ತಿಗೂ, ಏಕಾಂತದಲ್ಲಿ ಮುತ್ತಿಗೂ ಪ್ರಾಶಸ್ತ್ಯವಿತ್ತರಾಯಿತೆಂದೂ ತಿಳಿಯದೇ?

ಕುಮಾರ ಚಲವಾದಿ, ಹೊಳೆನರಸಿಪುರ

*ಹೆಂಡತಿಯ ನಗು, ತಾಯಿಯ ನಗು; ಯಾವುದು ಹೆಚ್ಚು?*

ನೀವು ಯಾರ ಬಳಿ ಹೆಚ್ಚು ಐಲೈಲಾಗಿ ಆಡುವಿರೋ ಅವರದು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಹಸಿವೆ ಇದ್ದಾಗ ಊಟ ಮಾಡಬೇಕು, ಹಸಿ ಇದ್ದಾಗ ಸಸಿ ನೆಡಬೇಕು. ಇದನ್ನು ರಾಜಕಾರಣಕ್ಕೆ ಹೋಲಿಸಿದರೆ?*

ಹಸುವಂತಹವರು ಸಿಕ್ಕಿದಾಗ ಲೂಟಿ ಮಾಡಬೇಕು, ಮಸಿ ಬಳಿದ ಕೈ ಬಿಸಿ ಮಾಡ್ಬೇಕು.

ಆರಿಫ್, ದಾವಣಗೆರೆ

*ನಾಯಿಯ ಬಾಲ ಡೊಂಕಾಗಿರಲು ಕಾರಣವೇನು?*

ತುಂಟ ಹುಡುಗರು ಸರಳರೇಖೆ ಎಳೆಯಲು ಸ್ಕೇಲ್ ಬದಲು ಬಾಲವನ್ನು ಬಳಸುತ್ತಿದ್ದುದರಿಂದ ನಾಯಿಯೇ ಡೊಂಕಿಸಿಕೊಂಡಿತಂತೆ!

ಮಹೇಶ್ ಸಾನಬಾಳ, ಮಸ್ಕಿ

*ಮನೆಯ ಹತ್ತಿರ ಇರುವ ದೇವರನ್ನು ಬಿಟ್ಟು ನೂರಾರು ಮೈಲಿ ದೂರವಿರುವ ದೇವರನ್ನು ಆರಾಧಿಸುವುದು ಏಕೆ?*

ಕಮಿಷನ್ ದುರಾಸೆಗೆ ದೂರದ ದೇಗುಲಗಳ ಪ್ರಚಾರ ಮಾಡುವ ಟಿವಿ ಜ್ಯೋತಿಷಿಗಳ ಪ್ರಭಾವ!

## ಬಹುಮಾನಿತ ಪ್ರಶ್ನೆ

ಅಭಿಷೇಕ ರ. ಬೊಂಗಾಳೆ, ಬೈಲಹೊಂಗಲ

*ಜನರಿಗೆ ಐವತ್ತು ವರ್ಷ ವಯಸ್ಸು ಆದಾಗ ತಲೆಗೂದಲು ಏಕೆ ಉದುರುತ್ತದೆ ಹೇಳಿ ರಾಮ್ ಸರ್?*

ಎಷ್ಟೇ ಯೋಚಿಸಿದರೂ ಒಳಗೆ ಏನೇನೂ ಹೊಳೆಯದ್ದರಿಂದ ಹೊರಗಾದರೂ ಹೊಳೆಯಲೆಂದು!

ರಮೇಶ ಜ. ಬೊಂಗಾಳೆ, ಬೈಲಹೊಂಗಲ

*ಹುಟ್ಟು ಆಕಸ್ಮಿಕ, ಸಾವು ನಿಶ್ಚಿತ. ಇವೆರಡರ ನಡುವೆ ಏನು ರಾಮ್?*

ಮೆಡಿಕಲ್ ಇಂಶೂರೆನ್ಸ್, ವೆಹಿಕಲ್ ಇಂಶೂರೆನ್ಸ್, ಲೈಫ್ ಇಂಶೂರೆನ್ಸ್!

ಎಚ್.ಆರ್. ದೇಸಾಯಿ, ರಾಯಚೂರು

*ಹಿಂದಿನ ರಾಜರ ಹಾಗೆ ಇಂದು ರಾಜ್ಯವಾಳುತ್ತಿರುವವರು ಕಿರೀಟ, ಖಡ್ಗವನ್ನೇಕೆ ಧರಿಸುವುದಿಲ್ಲ?*

ಕಿರೀಟದ ಭಾರಕ್ಕೆ ಸ್ಪಾಂಡಿಲೈಟಿಸ್, ಖಡ್ಗ ಸೆಳೆದರೆ ಮೊಳಕೈ ಸ್ಪ್ರೈನ್ ಆಗುವುದಂತೆ!

ಎಂ.ಆರ್. ಪವನ್ ಕುಮಾರ್, ಬಳ್ಳಾರಿ

*ದೇವರೇಕೆ ರಾಕ್ಷಸರನ್ನು ಸಂಹಾರ ಮಾಡಿದಂತೆ ದೆವ್ವವನ್ನು ಸಂಹಾರ ಮಾಡುತ್ತಿಲ್ಲ?*



ರಾಕ್ಷಸ ಪೌರಾಣಿಕ ಸತ್ಯ, ದೆವ್ವ ಮಾನಸಿಕ ಭ್ರಮೆ. ಭ್ರಮೆಯನ್ನು ಸಂಹರಿಸಲು ಯಾವ ದೇವನಿಗೂ ಸಾಧ್ಯವಿಲ್ಲ!

ಮಹಾಲಿಂಗ ಎಂ.ಗೋರಬಾಳ, ಮಾಣಿಕವಾಡಿ

*ವಿಧಿ, ವಿಧಾನ, ಮಂತ್ರೋಕ್ತಿಗಳಿಂದ ನಡೆದ ಮದುವೆ ಕೆಲವು ದಿನಗಳಲ್ಲಿ ಮುರಿದುಬೀಳಲು ಕಾರಣ?*

ತಾಳಿ ಕಟ್ಟುವುದು ಮುಖ್ಯವಲ್ಲ, ತಾಳಿಕೊಳ್ಳುವುದು ಮುಖ್ಯ ಎಂಬ ತಿಳುವಳಿಕೆ ಇಲ್ಲದಿರುವುದು!

ಎನ್.ಆರ್. ದೇಸಾಯಿ, ರಾಯಚೂರು

*ಎಲ್ಲಾ ಭಾಗ್ಯ ಸರ್ಕಾರವೇ ನೀಡುತ್ತಿದ್ದರೆ ದೇವರ ಕೆಲಸವೇನು?*

ಆ ಭಾಗ್ಯಗಳನ್ನೆಲ್ಲಾ ಪಡೆಯುವವರೆಗೆ ಜನರಿಗೆ ಉಸಿರುಭಾಗ್ಯ ನೀಡುವುದು!

■ ರಾಮ್